## ಕರ್ನಾಟಕ ಸರ್ಕಾರದ ನಡವಳಿಗಳು

16 NOV 2012
ಕರ್ನಾಟಕ ನೀರಾವರಿ ನಿಗಮ ನಿಯಮಿತ, ಬೆಂಗಳೂರು 560 001.

ವಿಷಯ: ಬೆಳಗಾವಿ ಜಿಲ್ಲೆ, ಚಿಕ್ಕೋಡಿ-ಸದಲಗ ಕ್ಷೇತ್ರ ವ್ಯಾಪ್ತಿಯ ಕಾಡಾಪುರ ಗ್ರಾಮದಲ್ಲಿನ ಕೆರೆಗೆ ಕೃಷ್ಣಾ ನದಿಯಿಂದ ನೀರನ್ನು ತುಂಬಿಸುವ ಕಾಮಗಾರಿಗೆ ಆಡಳಿತಾತ್ಮಕ ಅನುಮೋದನೆ ನೀಡುವ ಬಗ್ಗೆ.

*******

ಓದಲಾಗಿದೆ:

ಸರ್ಕಾರದ ಆದೇಶ ಸಂಖ್ಯೆ: ಸನೀಇ 07 ಎನೀಯೋ 2012, ದಿನಾಂಕ: 28-03-2012.

ಪ್ರಸ್ತಾವನೆ:

ಮೇಲೆ ಓದಲಾದ ಸರ್ಕಾರದ ಆದೇಶದಲ್ಲಿ ಚಿಕ್ಕೋಡಿ ತಾಲ್ಲೂಕಿನ ಕಾಡಾಪುರ ಗ್ರಾಮದ ಕೆರೆಯನ್ನು ಕೃಷ್ಣಾ ನದಿಯಿಂದ ನೀರು ತುಂಬಲು ಕರ್ನಾಟಕ ನೀರಾವರಿ ನಿಗಮಕ್ಕೆ ಹಸ್ತಾಂತರಿಸಲಾಗಿರುತ್ತದೆ. ಈ ಪ್ರದೇಶದ ಜನ ಪ್ರತಿನಿಧಿಗಳು ಈ ಕೆರೆಗೆ ನೀರು ತುಂಬುವ ಕಾಮಗಾರಿಯನ್ನು ಶೀಘ್ರವಾಗಿ ಕೈಗೊಳ್ಳುವಂತೆ ಸರ್ಕಾರವನ್ನು ಒತ್ತಾಯಿಸಿರುತ್ತಾರೆ.

ಮೇಲ್ಕಂಡ ಪ್ರಸ್ತಾವನೆಯನ್ನು ಪರಿಶೀಲಿಸಿ, ಈ ಕೆಳಗಿನಂತೆ ಆದೇಶವನ್ನು ಹೊರಡಿಸಲಾಗಿದೆ.

**ಸರ್ಕಾರದ ಆದೇಶ ಸಂಖ್ಯೆ: ಜಸಂಇ 82 ಎನ್‌ಐಎನ್ 2012, ಬೆಂಗಳೂರು, ದಿನಾಂಕ: 16-11-2012.**

ಬೆಳಗಾವಿ ಜಿಲ್ಲೆ, ಚಿಕ್ಕೋಡಿ-ಸದಲಗ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಕಾಡಾಪುರ ಗ್ರಾಮದಲ್ಲಿನ ಕೆರೆಗೆ ಕೃಷ್ಣಾ ನದಿಯಿಂದ ನೀರನ್ನು ತುಂಬಿಸುವ ಕಾಮಗಾರಿಯನ್ನು ಕರ್ನಾಟಕ ನೀರಾವರಿ ನಿಗಮಕ್ಕೆ 2012-13ನೇ ಸಾಲಿನ ಆಯವ್ಯಯದಲ್ಲಿ ಒದಗಿಸಲಾಗಿರುವ ಅನುದಾನದಲ್ಲಿ ರೂ.390.00 ಲಕ್ಷಗಳ (ರೂಪಾಯಿ ಮುನ್ನೂರ ತೊಂಬತ್ತು ಲಕ್ಷಗಳು ಮಾತ್ರ) ವೆಚ್ಚವನ್ನು ಬರಿಸಿಕೊಂಡು ಕೈಗೊಳ್ಳಲು ಆಡಳಿತಾತ್ಮಕ ಅನುಮೋದನೆಯನ್ನು ನೀಡಿದೆ. ಈ ಕಾಮಗಾರಿಯನ್ನು ಪ್ರಾರಂಭಿಸುವುದಕ್ಕೆ ಮೊದಲು ಈ ಕಾಮಗಾರಿಯ ಅಂದಾಜನ್ನು ಕರ್ನಾಟಕ ನೀರಾವರಿ ನಿಗಮದ ತಾಂತ್ರಿಕ ಉಪ ಸಮಿತಿಯಿಂದ ಪರಿಶೀಲಿಸಿಕೊಳ್ಳತಕ್ಕದ್ದು.

2. ಈ ಆದೇಶವನ್ನು, ಸರ್ಕಾರಿ ಆದೇಶ ಸಂಖ್ಯೆ: ಎಫ್‌ಡಿ 1 ಟಿಎಫ್‌ಪಿ 96, ದಿನಾಂಕ: 10-07-1996 ರಲ್ಲಿ ಸರ್ಕಾರದ ಇಲಾಖಾ ಕಾರ್ಯದರ್ಶಿಗಳಿಗೆ ನೀಡಲಾಗಿರುವ ಆರ್ಥಿಕ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

16/11/12
(ಕೆ.ಎಸ್.ನಾಗರಾಜ)
ಸರ್ಕಾರದ ಅಧೀನ ಕಾರ್ಯದರ್ಶಿ,
ಜಲ ಸಂಪನ್ಮೂಲ ಇಲಾಖೆ (ತಾಂತ್ರಿಕ-4).

16/11/12
AE-3

ಇವರಿಗೆ,

1. ಮಹಾ ಲೇಖಪಾಲರು (ಲೆಕ್ಕ ಪತ್ರ/ಲೆಕ್ಕ ಪರಿಶೋದನೆ), ಕರ್ನಾಟಕ, ಬೆಂಗಳೂರು.
2. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಕಾಫಿಬೋರ್ಡ್ ಕಟ್ಟಡ, ಬೆಂಗಳೂರು
3. ಸರ್ಕಾರದ ಉಪ ಕಾರ್ಯದರ್ಶಿ (ಕೃ.ಭಾ.ಜ.ನಿ.,), ಜಲ ಸಂಪನ್ಮೂಲ ಇಲಾಖೆ, ವಿಕಾಸ ಸೌಧ, ಬೆಂಗಳೂರು
4. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಜಲ ಸಂಪನ್ಮೂಲ ಇಲಾಖೆ ರವರ ಆಪ್ತ ಕಾರ್ಯದರ್ಶಿಗಳು, ವಿಕಾಸ ಸೌಧ, ಬೆಂಗಳೂರು
5. ಸರ್ಕಾರದ ಕಾರ್ಯದರ್ಶಿಗಳು, ಜಲ ಸಂಪನ್ಮೂಲ ಇಲಾಖೆ ರವರ ಆಪ್ತ ಸಹಾಯಕರು, ವಿಕಾಸ ಸೌಧ, ಬೆಂಗಳೂರು
6. ಸಂಬಂಧಿಸಿದ ಸಂಸ್ಥೆಯವರಿಗೆ
7. ಶಾಖಾ ರಕ್ಷಾ ಕಡತ/ಹೆಚ್ಚಿನ ಪ್ರತಿ.

*******

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
KARNATAKA NEERAVARI NIGAM LIMITED
(A Government of Karnataka Enterprise)

ಸಂಖ್ಯೆ: ಕೆಎನ್ಎನ್/1052/ಟಿಜಿಸಿ/2012/ 4362 ದಿನಾಂಕ: 4.1.2013

ಮುಖ್ಯ ಇಂಜಿನಿಯರ್,
ನೀರಾವರಿ (ಉತ್ತರ) ವಲಯ,
ಬೆಳಗಾವಿ.

ಮಾನ್ಯರೇ,

**ವಿಷಯ:** **ಬೆಳಗಾವಿ ಜಿಲ್ಲೆ, ಚಿಕ್ಕೋಡಿ-ಸದಲಗಾ ಕ್ಷೇತ್ರ ವ್ಯಾಪ್ತಿಯ ಕಾಡಾಪುರ ಗ್ರಾಮದಲ್ಲಿನ ಕೆರೆಗೆ ಕೃಷ್ಣಾ ನದಿಯಿಂದ ನೀರನ್ನು ತುಂಬಿಸುವ ಕಾಮಗಾರಿಗೆ ಆಡಳಿತಾತ್ಮಕ ಅನುಮೋದನೆ ನೀಡುವ ಬಗ್ಗೆ.**

**ಉಲ್ಲೇಖ:** **ಸರ್ಕಾರದ ನಡವಳಿ ಆದೇಶ ಸಂ: ಜಸಂಇ 82 ಎನ್ಐಎನ್ 2012, ಬೆಂಗಳೂರು ದಿ: 16.11.2012.**

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖದಡಿಯ ಸರ್ಕಾರದ ಆದೇಶ ಸಂ: ಜಸಂಇ 82 ಎನ್ಐಎನ್ 2012 ಬೆಂಗಳೂರು ದಿನಾಂಕ: 16.11.2012ರ ಪತ್ರವನ್ನು ಲಗತ್ತಿಸಿದೆ. ಸದರಿ ಸರ್ಕಾರದ ಪತ್ರದಲ್ಲಿನ ಆದೇಶದಂತೆ, ನಿಯಮಾನುಸಾರ ಮುಂದಿನ ಅಗತ್ಯ ಸೂಕ್ತ ಕ್ರಮಕ್ಕಾಗಿ ಕಳುಹಿಸಿ ಕೊಡಲಾಗಿದೆ.

ತಮ್ಮ ವಿಶ್ವಾಸಿ,
**ಸಹಿ/-**
**ವ್ಯವಸ್ಥಾಪಕ ನಿರ್ದೇಶಕರು**

**ಅಡಕ:** ಮೇಲಿನಂತೆ

ಪ್ರತಿಯನ್ನು ಈ ಕೆಳಕಂಡವರ ಮಾಹಿತಿಗಾಗಿ ಕಳುಹಿಸಿದೆ:

1) ಪ್ರಧಾನ ವ್ಯವಸ್ಥಾಪಕರು (ಆರ್ಥಿಕ), ಕನೀನಿನಿ, ಬೆಂಗಳೂರು.
2) ಮುಖ್ಯ ಲೆಕ್ಕಾಧಿಕಾರಿಗಳು, ಕನೀನಿನಿ, ಕೇಂದ್ರ ಕಛೇರಿ, ವಾಲ್ಮಿ ಕಟ್ಟಡ, ಧಾರವಾಡ.

**ವ್ಯವಸ್ಥಾಪಕ ನಿರ್ದೇಶಕರು**

*A Concern for Water*